ಇ) ಇಲ್ಲ.

ಈ) ಇಲ್ಲ

791 (999) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಕ್ಕೆ ಅಬಕಾರಿ ಇಲಾಖೆಯ ಸಾರಾಯಿ ಮೂಲದಿಂದ ಬರುತ್ತಿರುವ ಆದಾಯ ಎಷ್ಟು ,

ಆ) ಇಷ್ಟೊಂದು ಆದಾಯ ತರುತ್ತಿರುವ ಸಾರಾಯಿ ಮಾರಾಟಕ್ಕೆ ನಿಷೇಧವನ್ನು ತರುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಈ ಸಾರಾಯಿ ನಿಷೇಧದಿಂದ ಸರ್ಕಾರದ ಆರ್ಥಿಕ ಸ್ಥಿತಿಯ ಮೇಲಾಗುವ ದುಷ್ಪರಿಣಾಮ ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಈ ಆರ್ಥಿಕ ಕೊರತೆಯನ್ನು ಸರಿದೂಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಕಳೆದ ಮೂರು ವರ್ಷಗಳಲ್ಲಿ ಸಾರಾಯಿ ಮೂಲದಿಂದ ಬಂದ ಆದಾಯದ ವಿವರ ಈ ಕೆಳಗಿನಂತಿದೆ

ವರ್ಷ	ಸಾರಾಯಿ ಮೂಲಗಳಿಂದ ಬಂದ ಒಟ್ಟು ಆದಾಯ (ರೂ ಕೋಟಿಗಳಲ್ಲಿ)
2003–04	1037 38
2004–05	1257 56
2005–06	1565 43

2006–07ನೇ ಆರ್ಥಿಕ ವರ್ಷಕ್ಕೆ ಸಾರಾಯಿ ಮೂಲದಿಂದ 1906 28 ಕೋಟಿ ರೂಪಾಯಿಗಳ ಆದಾಯವು ಬರುವ ನಿರೀಕ್ಷೆ ಇದ್ದು ಡಿಸೆಂಬರ್ 2006ರ ಅಂತ್ಯಕ್ಕೆ ಸರ್ಕಾರಕ್ಕೆ 1267 98 ಕೋಟಿ ರೂ ಗಳ ಆದಾಯ ಸಂಗ್ರಹವಾಗಿರುತ್ತದೆ

ಆ), ಇ) ಮತ್ತು ಈ) ಸಾರಾಯಿಯನ್ನು ರದ್ದುಪಡಿಸುವ ಪ್ರಕ್ರಿಯೆಯ ಬಗ್ಗೆ ಸರ್ಕಾರವು ಗಂಭೀರ ಚಿಂತನೆ ನಡೆಸಿದೆ ಸರ್ಕಾರದ ಮೇಲೆ ಇದರಿಂದಾಗುವ ಸಾಮಾಜಿಕ ಪರಿಣಾಮ ಮತ್ತು ಆರ್ಥಿಕ ಪರಿಣಾಮಗಳಂತಹ ಸಮಸ್ಯೆಗಳನ್ನು ಪರಿಗಣಿಸಿ, ಅಂತಿಮ ತೀರ್ಮಾನ ಕೈಗೊಳ್ಳಬೇಕಾಗಿದೆ ಸಾರಾಯಿ ರದ್ದುಗೊಳಿಸುವುದರಿಂದ ಸಮಾಜದ ಮೇಲೆ ಆಗುವ ಸಾಮಾಜಿಕ ಪರಿಣಾಮ ಮತ್ತು ಸರ್ಕಾರದ ಮೇಲೆ ಆಗುವ ಆರ್ಥಿಕ ಸ್ಥಿತಿಗತಿಗಳ ಪರಿಣಾಮದ ಹಾಗೂ ಇತರೆ ತತ್ಸಂಬಂಧ ಪರಿಣಾಮಗಳ ಬಗ್ಗೆ ವಿವಿಧ ಹಂತಗಳಲ್ಲಿ ಮೌಲ್ಯ ಮಾಪನಗಳನ್ನು ನಡೆಸಿ ನಂತರ ಅಂತಿಮ ತೀರ್ಮಾನಕ್ಕೆ ಬರಲಾಗುವುದು

ಸಾರಾಯಿ ನಿಷೇಧದಿಂದ ಸರ್ಕಾರದ ರಾಜಸ್ವ ನಷ್ಟವಾಗಲಿದೆ ಆದರೆ ಸರ್ಕಾರಕ್ಕೆ ದೊರಕಬಹುದಾದ ಹೆಚ್ಚಿನ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ನಷ್ಟವನ್ನು ಅನುಭವಿಸಲು ತಯಾರಿದೆ ಸ್ವಲ್ಪಮಟ್ಟಿಗೆ ಸರ್ಕಾರದ ಖರ್ಚನ್ನು ಕಡಿಮೆ ಮಾಡಿ, ಅಲ್ಲದೆ ಬೇರೆ ರಾಜಸ್ವಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಈ ಖರ್ಚನ್ನು ಸರ್ಕಾರವು ಭರಿಸಲು ಚಿಂತನೆ ನಡೆಸಿದೆ

792 (1000) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಕ್ಷೇತ್ರದ ಕೈಗಾರಿಕಾ ಬೆಳವಣಿಗೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ,

ಆ) ಈ ಕಾರ್ಯಕ್ಕೆ ಸರ್ಕಾರ ಒದಗಿಸಿರುವ ಅನುದಾನವೆಷ್ಟು ,

ಇ) ಈ ಕ್ಷೇತ್ರದಲ್ಲಿ ಯಾವ ವಿವಿಧ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಜಿಸಿದೆ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 1) ಕೆಐಎಡಿಬಿ ವತಿಯಿಂದ ಇದುವರೆವಿಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಕೆಳಗಿನಂತೆ ಕೈಗಾರಿಕಾ ಪ್ರದೇಶ ಮತ್ತು ಏಕ ಘಟಕ ಸಂಕೀರ್ಣಗಳಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಕಲಂ 28(4) ರನ್ವಯ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ

	ಎ–ಗು
ಕೈಗಾರಿಕಾ ಪ್ರದೇಶ	128 02
ಏಕ ಘಟಕ	261 28
ಒಟ್ಟು	**389 30**

ಎ) ಚಿಕ್ಕಮಗಳೂರು ತಾಲ್ಲೂಕು ಅಂಬ್ಲೆ ಗ್ರಾಮದಲ್ಲಿ ಈಗಾಗಲೇ 47–16 ಎಕರೆ ಪ್ರದೇಶವನ್ನು ಕೈಗಾರಿಕಾ ಪ್ರದೇಶವನ್ನಾಗಿ (1ನೇ ಹಂತ ಮಿನಿ ಗ್ರೋಥ್ ಸೆಂಟರ್) ಅಭಿವೃದ್ಧಿಪಡಿಸಲಾಗಿದೆ ಇದರಲ್ಲಿ ಈಗಾಗಲೇ 14 ಉದ್ದಿಮೆದಾರರಿಗೆ ಕಾಫಿಕ್ಯೂರಿಂಗ್, ವುಡ್, ಕೆಮಿಕಲ್, ವೇರ್‌ಹೌಸಿಂಗ್ ಘಟಕ ಸ್ಥಾಪನೆಗಾಗಿ ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ

ಬಿ) ಸದರಿ ಕ್ಷೇತ್ರದಲ್ಲಿ 2ನೇ ಹಂತವಾಗಿ ಜನರಲ್ ಕೈಗಾರಿಕಾ ಪ್ರದೇಶವನ್ನು2007–08ನೇ ಸಾಲಿನಲ್ಲಿ 80 86 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಮಂಡಳಿಯು ಯೋಜಿಸಿದೆ

ಸಿ) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಪಡೇರಹಳ್ಳಿ ಗ್ರಾಮದಲ್ಲಿ 116 ಎಕರೆ 01 ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ